**ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರವರ ಕಛೇರಿ**
(ಜಾರಿ), ದಕ್ಷಿಣ ವಲಯ ವಾಣಿಜ್ಯ ತೆರಿಗೆ ಕಾರ್ಯಾಲಯ – 2
ಕೊಠಡಿ ಸಂಖ್ಯೆ 301 3ನೇ ಮಹಡಿ ಬಿ ಬ್ಲಾಕ್
ರಾಜೇಂದ್ರಪುರ ವಿವೇಕನಗರ ಅಂಚೆ,
ರಾಷ್ಟ್ರೀಯ ಕ್ರೀಡಾ ಗ್ರಾಮ ಹತ್ತಿರ
ಕೋರಮಂಗಲ ಬೆಂಗಳೂರು – 560 047

ಇ–ಮೇಲ್ addlcomenfsz@gmail com
addlcom enf@ctd ka gov in
ದೂ 080 25706210
ದೂ 080 25704971

ನಂ ವಾತೆಅಆ/ದವ/ಜಾರಿ/CR-01/24-25 ದಿನಾಂಕ 01-04-2025

## ಪತ್ರಿಕಾ ಪ್ರಕಟಣೆ

ದಿನಾಂಕ 29-03-2025 ರಂದು ವಾಣಿಜ್ಯ ತೆರಿಗೆ ಇಲಾಖೆಯ ಜಾರಿ, ದಕ್ಷಿಣ ವಲಯ, ಬೆಂಗಳೂರು ವಿಭಾಗದ 72 ಅಧಿಕಾರಿಗಳು, ಬೆಂಗಳೂರಿನ ಚಿಕ್ಕಪೇಟೆ ಹಾಗೂ ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವ ಎಲೆಕ್ಟ್ರಿಕಲ್, ಮೊಬೈಲ್ ಹಾಗೂ ಬಿಡಿಭಾಗಗಳು ಮತ್ತು ಹಾರ್ಡ್‌ವೇರ್ ಅಂಗಡಿಗಳ ಮೇಲೆ ಖಚಿತ ಮಾಹಿತಿಯನ್ನಾಧರಿಸಿ ದಾಳಿ ಮಾಡಿದ್ದಾರೆ ದಾಳಿಯ ಸಮಯದಲ್ಲಿ ವರ್ತಕರ ವಹಿವಾಟನ್ನು ಕೂಲಂಕುಷವಾಗಿ, ವಿಶೇಷವಾಗಿ ಅಂತರರಾಜ್ಯ ವಹಿವಾಟನ್ನು ಪರಿಶೀಲಿಸಲಾಗಿದೆ ಇತ್ತೀಚಿನ ದಿನಗಳಲ್ಲಿ ಹಲವು ವರ್ತಕರು ಗ್ರಾಹಕರು ಖರೀದಿಸಿದ ವಸ್ತುಗಳಿಗೆ ತೆರಿಗೆ ಬಿಲ್ಲುಗಳನ್ನು ನೀಡುತ್ತಿಲ್ಲ ಹಾಗೂ ಅಂತರರಾಜ್ಯದಿಂದ ತೆರಿಗೆ ಪಾವತಿಸದೆ ಎಲೆಕ್ಟ್ರಿಕಲ್, ಹಾರ್ಡ್‌ವೇರ್ ವಸ್ತುಗಳನ್ನು ರಾಜ್ಯಕ್ಕೆ ತರಲಾಗುತ್ತಿದೆ ಎಂದು ಇಲಾಖೆಗೆ ದೂರುಗಳು ಬಂದ ಹಿನ್ನಲೆಯಲ್ಲಿ ಹಾಗೂ ಚಲಿಸುವ ಜಾಗೃತಿ ದಳದ ಅಧಿಕಾರಿಗಳು ಸಂಗ್ರಹಿಸಿದ ಮಾಹಿತಿಯ ಆದಾರದಲ್ಲಿ ಈ ದಾಳಿ ನಡೆಸಲಾಗಿದೆ ಎಂದು ಜಾರಿ ವಿಭಾಗದ ಅಪರ ಆಯುಕ್ತರಾದ ಚಂದ್ರಶೇಖರ್ ನಾಯಕ್ ಎಲ್ ರವರು ತಿಳಿಸಿದ್ದಾರೆ

ದಾಳಿಯ ಸಮಯದಲ್ಲಿ ಅಧಿಕಾರಿಗಳು ಸುಮಾರು 3 ಕೋಟಿಯಷ್ಟು ಬಚ್ಚಿಟ್ಟ ತೆರಿಗೆಯನ್ನು ಪತ್ತೆ ಹಚ್ಚಿದ್ದು, 2 ಕೋಟಿಯಷ್ಟು ತೆರಿಗೆ ಮತ್ತು ದಂಡವನ್ನು ಸಂಗ್ರಹಿಸಿದ್ದು ಲೆಕ್ಕ ಪುಸ್ತಕಗಳ ಪರಿಶೀಲನೆಯನ್ನು ಮುಂದುವರಿಸಿದ್ದಾರೆ

ಗ್ರಾಹಕರು ಖರೀದಿಸುವ ಎಲ್ಲಾ ವಸ್ತುಗಳಿಗೂ ವರ್ತಕರು ಕಡ್ಡಾಯವಾಗಿ ರಸೀತಿಯನ್ನು ನೀಡಬೇಕೆಂದು, ಒಂದು ವೇಳೆ ರಸೀತಿಯನ್ನು ನೀಡದಿದ್ದ ಪಕ್ಷದಲ್ಲಿ ಗ್ರಾಹಕರು / ಸಾರ್ವಜನಿಕರು ವಾಣಿಜ್ಯ ತೆರಿಗೆಯ ಕಂಟ್ರೋಲ್ ರೂಮ್ (080 - 25704970) ಗೆ ಮಾಹಿತಿ ನೀಡಬಹುದಾಗಿದೆಯೆಂದು ಅಪರ ಆಯುಕ್ತರು ತಿಳಿಸಿದ್ದಾರೆ

ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು
(ಜಾರಿ), ದಕ್ಷಿಣ ವಲಯ, ಬೆಂಗಳೂರು